ಸಿಸಿ ನಂ.132/2016
ಚಾಸಾ-6 ಫ್ರಾಸಾ-11

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. **225/2017**

ಚಾಸಾ-6 ಫ್ರಾಸಾ-11

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 06.06.2025

| | | |
|---|---|---|
| ಹೆಸರು | : | ಸೈಬಣ್ಣ |
| ತಂದೆಯ ಹೆಸರು | : | ಮಾಳಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | : | ಕರಜಗಿ |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

ಚಾಸಾ 1 , ಚಾಸಾ 5 ರವರು ನನಗೆ ಪರಿಚಯ ಇರುತ್ತಾರೆ. ಚಾಸಾ 5 ರವರು ಗೂಳಿಕೆಲಸಕ್ಕೆ ಹೋಗಿರುತ್ತಾರೆ. ಎಲ್ಲಿ ಇರುತ್ತಾರೆ ಎಂಬುವುದು ಈಗ ಗೊತ್ತಿರುವುದಿಲ್ಲ. ಚಾಸಾ 7 ರವರು ನನಗೆ ಪರಿಚಯ. ನಾನು ಯಾವುದೇ ಜಗಳವನ್ನು ನೋಡಿಲ್ಲ ಮತ್ತು ಬಿಡಿಸಿಲ್ಲ, ನನಗೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನಿಂದ ಯಾವುದೇ ಹೇಳಿಕೆ ಪಡೆದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸ.ಸ.ಅ. ರವರಿಂದ**

ದಿನಾಂಕ 11.08.2015 ರಂದು ಬೆಳಿಗ್ಗೆ 7.00 ಗಂಟೆಗೆ ನಾನು ಮತ್ತು ಚಾಸಾ 4, 5, ಮತ್ತು 7 ರವರು ನಮ್ಮ ಊರಿನ ಸಾಯಬಣ್ಣ ಮಗೆ ರವರ ಮನೆಯ ಹತ್ತಿರ ಮಾತನಾಡುತ್ತಾ ನಿಂತಿದ್ದಾಗ ಅದೇ ಸಮಯಕ್ಕೆ ಚಾಸಾ 1 ರವರು ತಮ್ಮ ಮನೆಯ ಕಡೆಯಿಂದ ನಮ್ಮ ಕಡೆ ಬರುತ್ತಿದ್ದಾಗ ಆರೋಪಿಗಳೆಲ್ಲರೂ ಚಾಸಾ 1 ರವರಿಗೆ ರಸ್ತೆಅಡ್ಡುಗಟ್ಟಿ ಎ ಬೊಸಡಿ ಮಗನೆ ಹೊಲದಲ್ಲಿ ನನ್ನ ಜೊತೆ

ಜಗಳ ಮಾಡುತ್ತಿಯಾ ಅಂತಾ ಚಾಸಾ 1 ರವರ ಎದೆಯ ಮೇಲಿನ ಅಂಗಿ ಹಿಡಿದು ಎಳೆದಾಡಿ ಕೈಯಿಂದ ಹೊಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಆರೋಪಿಯು ಕಾಲಿನಿಂದ ವದ್ದಿರುತ್ತಾನೇ ಎಂದರೆ ನನಗೆ ಗೊತ್ತಿಲ್ಲ. ತಲೆ ಮರೆಸಿಕೊಂಡಿರುವ 3 ನೇ ಆರೋಪಿಯು ಚಾಸಾ 1 ರವರನ್ನು ಹಿಡಿದುಕೊಂಡಿದ್ದನ್ನು ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿಯು ಮನೆಯ ಮುಂದೆ ಇದ್ದಿದ್ದ ಕಟ್ಟಿಗೆ ಒಡೆಯುವ ಕೊಡಲಿಯಿಂದ ಚಾಸಾ 1 ರವರ ತಲೆಯ ಮೇಲೇ ಹೊಡೆದು ರಕ್ತ ಗಾಯ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಚಾಸಾ 4, 5 ಮತ್ತು 7 ರವರು ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-**7** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ **ASK** ವಕೀಲರಿಂದಃ-

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆಃ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

-